ಹರಿಹರ – ಕೊಟ್ಟೂರು – ರೈಲ್ವೇ ಮಾರ್ಗ ನಿರ್ಮಾಣ ಕಾಮಗಾರಿ ಕುಂಠಿತಗೊಂಡಿರುವುದು.

524 (5340) : ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹರಿಹರ–ಕೊಟ್ಟೂರು ರೈಲು ಮಾರ್ಗ ನಿರ್ಮಾಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳುವ ನಿರೀಕ್ಷೆ ಇದೆ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಕೊಟ್ಟೂರು – ಹರಿಹರ ರೈಲ್ವೆ ಮಾರ್ಗ ನಿರ್ಮಾಣ ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರವು 1:2 ಅನುಪಾತದಲ್ಲಿ ವೆಚ್ಚ ಆಧಾರಿತ ಯೋಜನೆಯಾಗಿ ಅನುಷ್ಠಾನ ಮಾಡಲಾಗುತ್ತಿವೆ. ಕೊಟ್ಟೂರಿನಿಂದ 45 ಕಿ.ಮೀ.ವರೆಗೆ ಭೂ ಕಾಮಗಾರಿ ಮತ್ತು ಸಣ್ಣ ಸೇತುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. 30 ಕಿ.ಮೀ.ವರೆಗೆ ದೊಡ್ಡ ಸೇತುವೆಗಳಿಗೆ ಕಾಂಟ್ರಾಕ್ಟ್ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

2005–06ನೇ ಸಾಲಿನ ಆಯವ್ಯಯದಲ್ಲಿ ವೆಚ್ಚ ಆಧಾರಿತ ರೈಲ್ವೆ ಯೋಜನೆಗಳಿಗೆ ರೂ. 1.00 ಕೋಟಿಯನ್ನು ನಿಗಧಿಪಡಿಸಲಾಗಿದ್ದ, ಈ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಕೋರಿ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ.

ಆಯವ್ಯಯದಲ್ಲಿನ ಉಳಿತಾಯ ಮತ್ತು ರಾಜ್ಯದ ಸಂಪನ್ಮೂಲವನ್ನು ಆಧರಿಸಿ ಈ ಯೋಜನೆಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುವುದು. ಈ ಕಾಮಗಾರಿಯನ್ನು ಪೂರ್ಣಗೊಳಿಸಲು ದಿನಾಂಕ ನಿಗಧಿಯಾಗಿರುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ಮಾನ್ಯ ಅಧ್ಯಕ್ಷರೇ, ಹರಿಹರ– ಕೊಟ್ಟೂರು ರೈಲ್ವೆ ಮಾರ್ಗ ನಿರ್ಮಾಣ ಕಾಮಗಾರಿಯನ್ನು ಯಾವ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ ಆದರೆ ಮಾನ್ಯ ಸಚಿವರು ಇದಕ್ಕಾಗಿ ದಿನಾಂಕ ನಿಗದಿಯಾಗಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಯಾವತ್ತು ತಾವು ಪೂರ್ಣ ಮಾಡುವಂತಹ ಅಂದಾಜು ಇದೆ? ಇದಕ್ಕಾಗಿ ಇಲ್ಲಿಯತನಕ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಇದಕ್ಕಾಗಿ ಅಂದಾಜು ಮಾಡಿರುವಂತಹ ಹಣವೆಷ್ಟು? ಇನ್ನೂ ಬೇಕಾಗಿರುವಂತಹ ಹಣವೆಷ್ಟು?

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೆ, ಈ ಹರಿಹರ–ಕೊಟ್ಟೂರು ರೈಲು ಮಾರ್ಗ ಸುಮಾರು 65 ಕಿ.ಮೀ. ಇರುತ್ತದೆ. ಇದಕ್ಕೆ ಒಟ್ಟು ವೆಚ್ಚ ಸುಮಾರು 124 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಬೇಕಾಗುತ್ತದೆ. ಕೊಟ್ಟೂರಿನಿಂದ 45 ಕಿ.ಮೀ.ವರೆಗೆ ಕೆಲಸ ಪ್ರಾರಂಭವಾಗಿದೆ. 30 ಕಿ.ಮೀ.ವರೆಗಿನ ಮಾರ್ಗದಲ್ಲಿ ದೊಡ್ಡ ಸೇತುವೆಗಳ ಕೆಲಸ ಗುತ್ತಿಗೆಗೆ ನೀಡಲಾಗಿದೆ. ಒಟ್ಟಾರೆ ಭೌತಿಕ ಪ್ರಗತಿ ಶೇಕಡ 20ರಷ್ಟು ಆಗಿದೆ 2005–06ನೇ ಸಾಲಿಗೆ ಸರ್ಕಾರವು 1 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಇದು ಸಾಲುವುದಿಲ್ಲ ಎನ್ನುವಂತಾದ್ದು ನನಗೆ ಗೊತ್ತಿದೆ. ಕೇಂದ್ರ ಸರ್ಕಾರ ಒಂದು ಭಾಗವನ್ನು ಕೊಟ್ಟರೆ, ರಾಜ್ಯ ಸರ್ಕಾರ ಎರಡು ಭಾಗ ಕೊಡಬೇಕು ಎಂಬುದು

ನಮಗಾಗಿರತಕ್ಕಂಥ ಒಪ್ಪಂದವಾಗಿದೆ. ಅಂದರೆ ಅನುಪಾತ 1:2. ಇದನ್ನು ಸರ್ಕಾರದ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ. ನನಗೆ ಇತರ ಆ ಭಾಗದ ಶಾಸಕರುಗಳೂ ಸಹಿತ ಈ ಹರಿಹರ–ಕೊಟ್ಟೂರು ಮಾರ್ಗವನ್ನು ಮಾಡಬೇಕೆಂದು ಬಹಳ ಒತ್ತಾಯ ಮಾಡಿ ಹೇಳಿದ್ದಾರೆ. ಈ ರೈಲು ಮಾರ್ಗ ಮಾಡತಕ್ಕಂಥದ್ದು ಬಹಳ ಬೇಗ ಆಗಬೇಕು ಅನ್ನತಕ್ಕಂಥದ್ದು ನಮ್ಮ ಆಸೆ. ಮಂಗಳೂರು ಪೋರ್ಟಿಗೆ ಇದರಿಂದ connectivity ಸಿಗುತ್ತದೆ ಅನ್ನತಕ್ಕಂಥ ಒಂದು ವಿಚಾರ ಸರ್ಕಾರದ ಗಮನದಲ್ಲಿದೆ. ನಾವು ಕೇಂದ್ರ ಸರ್ಕಾರದ ಮಂತ್ರಿಗಳನ್ನು ಭೇಟಿ ಮಾಡತಕ್ಕಂಥ ಸಂದರ್ಭದಲ್ಲಿ, ಇದಕ್ಕೆ ಆದಷ್ಟು ಬೇಗ ಒಂದು ಡೇಟ್ ಅನ್ನು ಫಿಕ್ಸ್ ಮಾಡಿ, ನಾಲ್ಕು ವರ್ಷವೋ, ಮೂರು ವರ್ಷವೋ ಎಂದು ಫಿಕ್ಸ್ ಮಾಡಿ, ಅದಕ್ಕೆ ತಕ್ಕಂತೆ ಪ್ರತಿವರ್ಷ ಹಣವನ್ನು ಬಿಡುಗಡೆ ಮಾಡಲಿಕ್ಕೆ ಒತ್ತಾಯವನ್ನು ಮಾಡುತ್ತೇನೆ.

ರೇಷ್ಮೆ ಬೆಳೆಗಾರರನ್ನು ಉತ್ತೇಜಿಸಲು ಸರಕಾರದ ಯೋಜನೆಗಳು

511 (5623) : **ಶ್ರೀ ರವಿ ಸಿ. ಟಿ. (ಚಿಕ್ಕಮಗಳೂರು)** : ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೇಷ್ಮೆ ಬೆಳೆಗಾರರನ್ನು ಉತ್ತೇಜಿಸಲು ಸರ್ಕಾರ ರೂಪಿಸಿರುವ ಯೋಜನೆಗಳಾವುವು;

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ರೇಷ್ಮೆ ಉತ್ಪದನಾ ಪ್ರಮಾಣ ಎಷ್ಟು;

ಇ) ಈ ಜಿಲ್ಲೆಯ ರೇಷ್ಮೆ ಬೆಳೆಯುವ ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)?

ಶ್ರೀ ಸಿ. ಚನ್ನಿಗಪ್ಪ (ಮಾನ್ಯ ರೇಷ್ಮೆ ಸಚಿವರು) :

ಅ) ರೇಷ್ಮೆ ಬೆಳೆಗಾರರನ್ನು ಉತ್ತೇಜಿಸಲು ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ರಾಜ್ಯ ಸರ್ಕಾರ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದ ಕೆಟಲಿಟಿಕ ಅಭಿವೃದ್ಧಿ ಕಾರ್ಯಕ್ರಮಗಳು:

1) ಹೊಸ ಹಿಪ್ಪನೇರಳೆ ತಳಿ ಅಭಿವೃದ್ಧಿ–ಕಿಸಾನ್ ನರ್ಸರಿಗೆ ಪ್ರೋತ್ಸಾಹಧನ ರೂ. 50.000/ – ಒಂದು ಲಕ್ಷ ಹಿಪ್ಪನೇರಳೆ ಸಸಿಗಳಿಗೆ,

2) ಹಿಪ್ಪನೇರಳೆ ತೋಟಿಗಳಿಗೆ ಹನಿನೀರಾವರಿ ಘಟಕ ಅಳವಡಿಕೆಗೆ ಸಹಾಯ ಧನ ರೂ. 24.000/– ಒಂದು ಹೆಕ್ಟೇರ್‌ಗೆ,

3) ಪ್ರತ್ಯೇಕ ಹುಳು ಸಾಕುವ ಮನೆಗೆ ಸಹಾಯಧನ ರೂ. 50.000/– 1000 ಚ.ಅ ಮನೆಗೆ, ರೂ. 25.000/– 600 ಚ.ಅ ಮನೆಗೆ, ರೂ 15000/– 375 ಚ.ಅ ಮನೆಗೆ,

4) ರೇಷ್ಮೆ ಹುಳು ಸಾಕುವ ಸಲಕರಣೆಗಳಿಗೆ ಸಹಾಯಧನ ರೂ. 15000/–

5) ರೋಗ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳ ಸರಬರಾಜು,

6) ರೇಷ್ಮೆ ಬೆಳೆಗಾರರಿಗೆ ತರಬೇತಿ ಮತ್ತು ಟೂಲ್‌ಕಿಟ್ಸ್ ನೀಡಿಕೆಗೆ ರೂ.2000/– ಪ್ರತಿ ಶಿಕ್ಷಣಾರ್ಥಿಗೆ,

7) ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ರೂ.50000/–

8) ಚಾಕಿ ಸಾಕಾಣಿಕಾ ಸಲಕರಣೆಗಳಿಗೆ ಸಹಾಯಧನ ರೂ.100000/–,

9) ಸ್ಥಳೀಯ ಭಾಷೆಗಳಲ್ಲಿ ದೃಶ್ಯ ಮತ್ತು ಪ್ರಚಾರ ಸಾಹಿತ್ಯ ಮುದ್ರಣ.